(ಆ) ಈ ಯೋಜನೆಗಳಿಂದ ಈ ಕ್ಷೇತ್ರದ ಎಷ್ಟು ಜನರಿಗೆ ಪ್ರಯೋಜನ ಗಳಾಗಿವೆ. ಇದಕ್ಕಾಗಿ ಈ ಅವಧಿಯಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡ ಲಾಯಿತು.

(ಇ) ಇದೇ ಅವಧಿಯಲ್ಲಿ ಈ ಕ್ಷೇತ್ರದ ಎಷ್ಟು ಜನರಿಗೆ ಬಿಪಿಎಲ್ ಕಾರ್ಡು ಗಳನ್ನು ವಿತರಣೆ ಮಾಡಲಾಗಿದೆ.

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

(ಅ) ದಿನಾಂಕ: 01.05.2013 ರಿಂದ 01.05.2014ರ ವರೆಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಜಾರಿಗೆ ತರಲಾಗಿದೆ.

1. ಅನ್ನಭಾಗ್ಯ ಯೋಜನೆ : 10.07.2013

2. ಪಡಿತರ ಖಾತರಿ ಯೋಜನೆ : 01.02.2014

3. ಅನ್ನಭಾಗ್ಯ ಅದಾಲತ್ : 220.01.2014

4. ಸೀಮೆಎಣ್ಣೆ ಖಾತರಿ : 10.02.2014 (ಜೂನ್ 2014 ರಿಂದ ಜಾರಿಗೆ)

(ಆ) ಸದರಿ ಯೋಜನೆಗಳಿಂದ ಈ ಕ್ಷೇತ್ರದಲ್ಲಿ 35012 ಬಿಪಿಎಲ್ ಪಡಿತರ ಚೀಟಿವುಳ್ಳ ಜನರಿಗೆ ಪ್ರಯೋಜನಗಳಾಗಿವೆ. ಸದರಿ ಅವಧಿಯಲ್ಲಿ 12,27,74,090 ರೂ. ವೆಚ್ಚವಾಗಿರುತ್ತದೆ. (1. ಆಹಾರ ಧಾನ್ಯ ಸಹಾಯ ಧನ ಮತ್ತು ಹಮಾಲಿ ವೆಚ್ಚ ಸೇರಿರುತ್ತದೆ)

(ಇ) ಈ ಅವಧಿಯಲ್ಲಿ 5369 ಬಿಪಿಎಲ್ ಕಾರ್ಡ್ ವಿತರಣೆಯಾಗಿರುತ್ತದೆ.

ಬೀದರ್ ಜಿಲ್ಲೆಗೆ ನರ್ಮ್ ಯೋಜನೆಯ ವಿಸ್ತರಣೆ:

780 (1441); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ಖರೀದಿಸಲಾಗಿದೆ; ಇದಕ್ಕಾಗಿ ಕೇಂದ್ರ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ; ಬೀದರ್ ಜಿಲ್ಲೆಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

(ಆ) ಜಿಲ್ಲೆಯಲ್ಲಿ ಸಂಚರಿಸುತ್ತಿರುವ ಬಹುತೇಕ ಸಾರಿಗೆ ಬಸ್ಸುಗಳು ಹಳೆಯ ದಾಗಿದ್ದು ಹೊಸ ಬಸ್ಸುಗಳನ್ನು ಖರೀದಿಸಲು ಅನುಕೂಲವಾಗುವಂತೆ ನರ್ಮ್ ಯೋಜನೆಯನ್ನು ಬೀದರ್ ಜಿಲ್ಲೆಗೂ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

(ಅ) ಕಳೆದ 03 ವರ್ಷಗಳಲ್ಲಿ ನರ್ಮ ಯೋಜನೆ ಅಡಿಯಲ್ಲಿ ಯಾವುದೇ ಬಸ್ಸುಗಳನ್ನು ಖರೀದಿಸಿರುವುದಿಲ್ಲ.

2013–14ನೇ ಸಾಲಿನಲ್ಲಿ ಈ. ಕ. ರ. ಸಾ. ಸಂಸ್ಥೆಗೆ ಒಟ್ಟು 329 ಬಸ್ಸು ಗಳಿಗೆ ನರ್ಮ ಯೋಜನೆಯಡಿಯಲ್ಲಿ ಮಂಜೂರಾತಿ ದೊರಕಿದ್ದು, ಈ ಪೈಕಿ ಬೀದರ ನಗರಕ್ಕೆ 20 ವಾಹನಗಳನ್ನು ಹಂಚಿಕೆ ಮಾಡಲಾಗಿದೆ. ಮೇಲ್ಕಂಡ ವಾಹನಗಳ ಖರೀದಿಗಾಗಿ ಕೇಂದ್ರ ಸರ್ಕಾರದ ಮೊದಲನೇ ಕಂತಿನ ಅನುದಾನ ಬಿಡುಗಡೆಯಾಗಬೇಕಾಗಿದೆ.

(ಆ) ನರ್ಮ್ ಯೋಜನೆಯಲ್ಲಿ ನಗರ ಸಾರಿಗೆ ವಾಹನಗಳ ಖರೀದಿಗೆ ಮಾತ್ರ ಅವಕಾಶವಿದ್ದು, ಅದರಂತೆ ಸದರಿ ಯೋಜನೆಯಡಿ ಬೀದರ್ ನಗರಕ್ಕೆ 20 ನಗರ ಸಾರಿಗೆ ವಾಹನಗಳ ಮಂಜೂರಾತಿ ದೊರಕಿರುತ್ತದೆ. ಸದರಿ ವಾಹನಗಳನ್ನು ಮುಂಬರುವ ದಿನಗಳಲ್ಲಿ ಕಾರ್ಯಚರಣೆ ಪ್ರಾರಂಭಿಸಿ ನಗರದ ಪ್ರಯಾಣಿಕರಿಗೆ ವ್ಯವಸ್ಥಿತ ಮತ್ತು ಸಮರ್ಪಕವಾದ ನಗರ ಸಾರಿಗೆ ಸೇವೆ ಒದಗಿಸಲು ಯೋಜನೆ ರೂಪಿಸಲಾಗಿರುತ್ತದೆ.